ಅಸಲು ದಾವಾ ಸಂಖ್ಯೆ83/2019
ಪಿ.ಡಬ್ಲ್ಯು:2/ಕೆ. ಎ
ಬಾಬುರೆಡ್ಡಿ

**ದಿನಾಂಕ 26.11.2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ : ಶ್ರೀ ಆರ್. ಜೆ. ವಾದಿ ಪರ ವಕೀಲರಿಂದ**

ನನ್ನ ಮುಖ್ಯ ವಿಚಾರಣೆ ಭಾಗವಾಗಿ ಪ್ರಮಾಣಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತದೆ. ಅದನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ಈ ಹಂತದಲ್ಲಿ ಸಾಕ್ಷಿಯು ನಿಪಿ-1 ರಂತೆ ಕ್ರಯ ಪತ್ರವನ್ನು ನೋಡಿ ಗುರುತಿಸಿದರು. ಸದರಿ ಕ್ರಯಪತ್ರದಲ್ಲಿ ಘಂಟವಾರಿಪಲ್ಲಿಯ ಸರ್ವೆ ನಂ.56/2 ಸ್ವತ್ತನ್ನು 1, 4 ಮತ್ತು 5 ನೇ ಪ್ರತಿವಾದಿಗಳು ವಾದಿಯ ಪರವಾಗಿ ಬರೆದುಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಪತ್ರಕ್ಕೆ ನಾನು ಸಹಿ ಮಾಡಿರುತ್ತೇನೆ ಎಂದು ನುಡಿದು, ಅದರಲ್ಲಿರುವ ವಾದಿ, 1,4 ಮತ್ತು 5 ನೇ ಪ್ರತಿವಾದಿಗಳ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದರು. ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ವಾದಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಮೃತ ಕೆ.ಬಿ. ಆದಿನಾರಾಯಣರವರ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು. 4 ಮತ್ತು 5 ನೇ ಪ್ರತಿವಾದಿಗಳ ಸಹಿಗಳನ್ನು ಕ್ರಮವಾಗಿ ನಿಪಿ-1(ಡಿ) ಮತ್ತು (ಇ) ಎಂದು ಗುರುತಿಸಲಾಯಿತು.

ಆದುದರಿಂದ, ದಾವೆಯನ್ನು ಡಿಕ್ರಿಗೊಳಿಸಬೇಕೆಂದು ಪ್ರಾರ್ಥಿಸುತ್ತೇನೆ.

ಪಿ.ಡಬ್ಲ್ಯು:2/ಕೆ. ಎ
ಬಾಬುರೆಡ್ಡಿ

(**ಪಾಟೀ ಸವಾಲು ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ

ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಬಾಗೇಪಲ್ಲಿ.